**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್** *31/2021*

ದಿನಾಂಕಃ *04.07.2023*
(ಸಾಕ್ಷಿಗೆ ಪ್ರಮಾಣ **ಮಾಡಿಸಲಾಯಿತು.**)

ಪ್ರಾ.ಸಾಃ *2* (ಚಾ.ಸಾ.*5* )

| | | |
|---|---|---|
| ಹೆಸರು | ಃ | ಹನುಮಂತೇಗೌಡ ಡಿ ಸಿ |
| ತಂದೆಯ ಹೆಸರು | ಃ | ಚನ್ನೇಗೌಡ |
| ವಯಸ್ಸು | ಃ | *50* ವರ್ಷ |
| ಉದ್ಯೋಗ | ಃ | ಎ ಎಸ್ ಐ, ಬಿಡದಿ ಪೋಲೀಸ್ ಠಾಣೆ |
| ವಾಸ ಸ್ಥಳ | ಃ | **ರಾಮನಗರ** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನವೆಂಬರ್ *2015* ರಿಂದ *2021* ಆಗಸ್ಟ್ ವರೆಗೆ ರಾಮನಗರ ಪುರ ಪೋಲೀಸ್ ಠಾಣೆಯಲ್ಲಿ ಹೆಚ್ ಸಿ *56* ಎಂದು ಕೆಲಸ ಮಾಡಿರುತ್ತೇನೆ.

*2.* ದಿ.*04.11.2020* ರಂದು ಠಾಣೆಯಲ್ಲಿ ನಾನು ತನಿಖಾಸಹಾಯಕನಾಗಿ ಕೆಲಸ ಮಾಡುತ್ತಿರುವಾಗ ಮಧ್ಯಾಹ್ನ *1.00* ಗಂಟೆಗೆ ಚಾಸಾ-*1* ರವರು ಆರ್ ಎಂ ಸಿ ರಸ್ತೆಯಲ್ಲಿ ಯಾರೋ ಒಬ್ಬ ಆಕ್ರಮವಾಗಿ ಗಾಂಜಾ ಚೀಲ ಹಿಡಿದುಕೊಂಡು ಕುಳಿತಿದ್ದಾನೆ, ದಾಳಿ ಮಾಡಬೇಕಾಗಿದೆ ಎಂದು ಹೇಳಿದರು. ಠಾಣೆ ಮುಂಭಾಗದಲ್ಲಿ ಹೋಗುತ್ತಿದ್ದ ಚಾಸಾ-*3* ಮತ್ತು *4* ಇವರನ್ನು ಠಾಣೆಗೆ ಕರೆಸಿದರು. ಅದೇ ಸಮಯಕ್ಕೆ ಚಾಸಾ-*2* ರವರು ಠಾಣೆಗೆ ಬಂದರು.

*3.* ಮಧ್ಯಾಹ್ನ *1.30* ಗಂಟೆಗೆ ಸರ್ಕಾರಿ ಜೀಪ್ ನಲ್ಲಿ ಕೆಎ-*04*-ಜಿ-*294* ರಲ್ಲಿ ಚಾಸಾ-*1, 3, 4,* ಚಾಸಾ-*6* ರಿಂದ *10* ಮತ್ತು ನಾನು *1.30* ಕ್ಕೆ ಠಾಣೆಯಿಂದ ಹೊರಟು, *1.40* ಗಂಟೆಗೆ ಬಾಲಗೇರಿ-ಅರ್ ಎಂ ಸಿ ರಸ್ತೆಯಲ್ಲಿ ಹೋದೆವು. ದೊಡ್ಡಮ್ಮ ಚಿಕ್ಕಮ್ಮ ದೇವಸ್ಥಾನ ಹತ್ತಿರ ಜೀಪ್ ನಿಲ್ಲಿಸಿದೆವು. ನಾವು ಪರಸ್ಪರ ಅಂಗಶೋಧನೆ ಮಾಡಿಕೊಂಡೆವು. ಅಲ್ಲಿ ಕುಳಿತು ಗಮನಿಸಿದಾಗ ಆರ್ಕಾವತಿ

ಸೇತುವೆಯ ಬಳಿ ರಸ್ತೆ ಪಕ್ಕ ಆರೋಪಿ ಕುಳಿತಿದ್ದ, ಅವನ ಹತ್ತಿರ ಒಂದು ಬಿಳಿ ಚೀಲ ಇತ್ತು. ನಾವು ಸಮವಸ್ತ್ರದಲ್ಲಿದ್ದ ಇದ್ದುದ್ದನ್ನು ನೋಡಿ ಆರೋಪಿ ವಿಚಲಿತನಾಗಿ ಅನುಮಾನಸ್ಪಾದವಾಗಿ ವರ್ತಿಸಿದ. ಆರೋಪಿ ಕುಳಿತಿದ್ದ ಜಾಗ ನಾವು ನಿಂತಿದ್ದ ಜಾಗದಿಂದ ಸುಮಾರು *40-50* ಮೀಟರ್ ದೂರ ಇತ್ತು. ನಾವು ಸುತ್ತುವರೆದು ಆತನನ್ನು ಹಿಡಿದೆವು. ಚಾಸಾ-*1* ಆರೋಪಿಯನ್ನು ವಿಚಾರಿಸಿದಾಗ ತನ್ನ ಹೆಸರು ಸಿದ್ದಿಕ್ ವಾಸ ಐಜೂರು ಎಂದು ಹೇಳಿದ. ಚಾಸಾ-*2* ರವರು ಚಾಸಾ-*1* ವರಿಗೆ ಅರೋಪಿಗೆ ನೋಟೀಸ್ ಕೊಡುವಂತೆ ತಿಳಿಸಿದರು, ಆ ಪ್ರಕಾರ ಚಾಸಾ-*1* ರವರು ಅರೋಪಿಗೆ ನೋಟೀಸ್ ಕೊಟ್ಟರು. ಚಾಸಾ-*2* ರವರು ಚಾಸಾ-*1* ವರಿಗೆ ಆರೋಪಿ ಹತ್ತಿರ ಇದ್ದ ಚೀಲವನ್ನು ಪರಿಶೀಲಿಸಲು ಹೇಳಿದರು. ಚಾಸಾ-*1* ರವರು ಸದರಿ ಚೀಲವನ್ನು ತೆರೆದು ನೋಡಿದಾಗ ಅದರಲ್ಲಿ ಗಾಂಜಾದ ಒಣಗಿದ ಸೊಪ್ಪಿನ ಪುಡಿ ಇತ್ತು. ಒಂದು ಪ್ರಾವಿಷನ್ ಸ್ಟೋರ್ ನಿಂದ ಡಿಜಿಟಲ್ ತೂಕದ ಯಂತ್ರವನ್ನು ನಮ್ಮ ಸಿಬ್ಬಂದಿ ತಂದರು. ಅದರಿಂದ ತೂಕ ಮಾಡಲಾಗಿ ಸದರಿ ಗಾಂಜಾ ಸೊಪ್ಪು *7* ಕೆ ಜಿ *745* ಗ್ರಾಂ ಇತ್ತು. ಸದರಿ ಚೀಲದ ಬಾಯಿ ಕಟ್ಟಿ ಆರ್ ಎಂಬ ಅಕ್ಷರದಿಂದ ಸೀಲು ಮಾಡಿ, ಮಧ್ಯಾಹ್ನ *1.45* ರಿಂದ *2.45* ಗಂಟೆ ವರೆಗೆ ಚಾಸಾ-*1* ರವರು ಪಂಚನಾಮೆ ಮಾಡಿಕೊಂಡು ಸದರಿ ಗಾಂಜಾ ಇರುವ ಚೀಲವನ್ನುಅಮಾನತ್ತು ಮಾಡಿಕೊಂಡರು. ಸದರಿ ಗುರುತಿಸಿದ ಪಂಚನಾಮೆಯನ್ನು ನಿಪಿ-*5* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*5* ಬಿ ಎಂದು ಗುರುತಿಸಲಾಯಿತು. ನಂತರ ಅಮಾನತ್ತು ಪಡಿಸಿಕೊಂಡ ವಸ್ತುವಿನೊಂದಿಗೆ ಅರೋಪಿಯನ್ನ ಪೋಲೀಸ್ ಠಾಣೆಗೆ ತಂದೆವು. ಸದರಿ ಆರೋಪಿ ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ. ಅದೇ ಪ್ರಕಾರ ನಾನು ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಜಿ ಅರ್ ವಕೀಲರಿಂದಃ**

*2.* ನಾವು ನಮ್ಮ ಸಿಬ್ಬಂದಿ ಕೃತ್ಯ ಸ್ಥಳಕ್ಕೆ ಹೋಗಿಲ್ಲ, ಅರೋಪಿ ಅಲ್ಲಿ ಇರಲಿಲ್ಲ, ಅವನ ವಶದಿಂದ ಯಾವುದೇ ಗಾಂಜಾವನ್ನು ಮಹಜರು ಮಾಡಿ ಅಮಾನತ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಗಾಂಜಾವನ್ನು ಸ್ಥಳದಲ್ಲಿ ತೂಕ ಮಾಡಿಲ್ಲ ಅಂದರೆ ಸರಿಯಲ್ಲ. ದಾಖಲೆಗಳನ್ನು ಸುಳ್ಳು ಸೃಷಿಟ ಮಾಡಿ ಆರೋಪಿ

ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಅರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

***<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

*(ನಿಂಗಪ್ಪ ಪರಶುರಾಮ ಕೋಪರ್ಡೆ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>**